# ಕರ್ನಾಟಕ ವಿಧಾನ ಪರಿಷತ್ತು

ಲಘು ಪ್ರಕಟಣೆ ಭಾಗ – 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

**ಬುಧವಾರ, ದಿನಾಂಕ: 24ನೇ ಜನವರಿ, 2018**

ಸಂಖ್ಯೆ: 04

## ವಿಧಾನ ಪರಿಷತ್ತಿನ ಅಧಿವೇಶನ ಮುಕ್ತಾಯಗೊಂಡಿರುವ ಬಗ್ಗೆ

ದಿನಾಂಕ::24ನೇ ನವೆಂಬರ್, 2017ರ ಶುಕ್ರವಾರದಂದು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾದ ವಿಧಾನ ಪರಿಷತ್ತಿನ ನೂರ ಮೂವತ್ತಮೂರನೆ ಅಧಿವೇಶನ (ಮುಂದುವರೆದ ಉಪವೇಶನಗಳು)ವನ್ನು 19ನೇ ಜನವರಿ, 2018ರ DPAL/09/SAMVYAVI/2017ನೇ ಸಂಖ್ಯೆಯ ಅಧಿಸೂಚನೆಯ ಮೂಲಕ ಘನತೆವೆತ್ತ ರಾಜ್ಯಪಾಲರು ಮುಕ್ತಾಯಗೊಳಿಸಿರುತ್ತಾರೆ.

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ(ಪ್ರ)

ಗೆ:

1. ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ
2. ದಿನಾಂಕ: 24ನೇ ಜನವರಿ, 2018ರ ರಾಜ್ಯ ವಿಶೇಷ ಪತ್ರಾಂಕಿತದಲ್ಲಿ ಪ್ರಕಟಿಸಿ ಈ ಸಚಿವಾಲಯಕ್ಕೆ 50 ಪ್ರತಿಗಳನ್ನು ಕಳುಹಿಸಿಕೊಡುವಂತೆ ಕರ್ನಾಟಕ ರಾಜ್ಯದ ಪತ್ರಾಂಕಿತ ಸಂಕಲನಕಾರರನ್ನು ಕೋರಲಾಗಿದೆ.

ಪ್ರತಿಗಳು:

01. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಬೆಂಗಳೂರು.
02. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ, ಬೆಂಗಳೂರು.
03. ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಇಲಾಖೆ, ಬೆಂಗಳೂರು.
04. ಭಾರತ ಸರ್ಕಾರದ ನ್ಯಾಯಾಂಗ ಇಲಾಖೆಯ ಕಾರ್ಯದರ್ಶಿಯವರಿಗೆ, ನವದೆಹಲಿ.
05. ಭಾರತ ಸರ್ಕಾರಕ ಎಲ್ಲಾ ಕಾರ್ಯದರ್ಶಿಗಳಿಗೆ, ನವದೆಹಲಿ.
06. ಭಾರತ ಸರ್ಕಾರದ ಸಾಂಸದಿಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿಯವರಿಗೆ, ನವದೆಹಲಿ.
07. ಭಾರತ ಸರ್ಕಾರದ ಗೃಹ ಇಲಾಖೆಯ ಕಾರ್ಯದರ್ಶಿಯವರಿಗೆ, ನವದೆಹಲಿ.
08. ಮಹಾ ಕಾರ್ಯದರ್ಶಿ, ರಾಜ್ಯಸಭೆ/ಲೋಕಸಭೆ, ನವದೆಹಲಿ.
09. ಕಾರ್ಯದರ್ಶಿ, ಭಾರತ ಚುನಾವಣಾ ಆಯೋಗ, ನವದೆಹಲಿ.
10. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿ, ರಾಜಭವನ, ಕರ್ನಾಟಕ, ಬೆಂಗಳೂರು.
11. ಸ್ಥಾನೀಯ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
12. ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ, ಕರ್ನಾಟಕ ಭವನ –1, ನವದೆಹಲಿ.
13. ಅಡ್ವೊಕೇಟ್ ಜನರಲ್, ಉಚ್ಛ ನ್ಯಾಯಾಲಯ ಕಟ್ಟಡ, ಬೆಂಗಳೂರು.
14. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
15. ಎಲ್ಲಾ ರಾಜ್ಯ ವಿಧಾನಮಂಡಲಗಳ ಕಾರ್ಯದರ್ಶಿಗಳಿಗೆ.
16. ಕರ್ನಾಟಕ ಸರ್ಕಾರದ ಎಲ್ಲಾ ಇಲಾಖಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ.
17. ನಿರ್ದೇಶಕರು, ಆಕಾಶವಾಣಿ, ರಾಜಭವನ ರಸ್ತೆ, ಬೆಂಗಳೂರು.
18. ನಿರ್ದೇಶಕರು, ದೂರದರ್ಶನ ಕೇಂದ್ರ, ಜೆ.ಸಿ. ನಗರ, ಬೆಂಗಳೂರು.
19. ನಿರ್ದೇಶಕರು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ಇಲಾಖೆ, ಬೆಂಗಳೂರು.
20. ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು.
21. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕ.ವಿ.ಪ.
22. ಮಾನ್ಯ ಉಪ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರಿಗೆ, ಕ.ವಿ.ಪ.
23. ಮಾನ್ಯ ವಿರೋಧ ಪಕ್ಷದ ನಾಯಕರ ಆಪ್ತ ಕಾರ್ಯದರ್ಶಿಯವರಿಗೆ, ಕ.ವಿ.ಪ.
24. ಮಾನ್ಯ ಸರ್ಕಾರಿ ಮುಖ್ಯ ಸಚೇತಕರ ಆಪ್ತ ಕಾರ್ಯದರ್ಶಿಯವರಿಗೆ, ಕ.ವಿ.ಪ.
25. ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರ ಆಪ್ತ ಕಾರ್ಯದರ್ಶಿಯವರಿಗೆ, ಕ.ವಿ.ಪ.

# ಕರ್ನಾಟಕ ವಿಧಾನ ಪರಿಷತ್ತು

ಸಂಖ್ಯೆ:ಕವಿಪ:ಶಾರಶಾ:09:134ನೇಅ:2018

ವಿಧಾನ ಪರಿಷತ್ತಿನ ಸಚಿವಾಲಯ,
ಅಂಚೆ ಪೆಟ್ಟಿಗೆ ಸಂಖ್ಯೆ:5079, ವಿಧಾನಸೌಧ,
ಬೆಂಗಳೂರು–560 001, ದಿನಾಂಕ:24.01.2018.

**ಮಾನ್ಯರೆ,**

ಭಾರತ ಸಂವಿಧಾನದ 174(1)ನೇ ಅನುಚ್ಛೇದದ ಮೇರೆಗೆ, ಘನತೆವೆತ್ತ ರಾಜ್ಯಪಾಲರು ತಮ್ಮ ಅಧಿಕಾರವನ್ನು ಚಲಾಯಿಸಿ 2018ನೇ ಇಸವಿ ಫೆಬ್ರವರಿ, 05ನೇ ಸೋಮವಾರದಂದು ಪೂರ್ವಾಹ್ನ 11.00 ಗಂಟೆಗೆ ಕರ್ನಾಟಕ ವಿಧಾನ ಪರಿಷತ್ತು, ಬೆಂಗಳೂರಿನಲ್ಲಿ ಸಭೆ ಕರೆದಿರುತ್ತಾರೆ.

2018ನೇ ಇಸವಿ ಫೆಬ್ರವರಿ, 05ನೇ ಸೋಮವಾರದಂದು, ಪೂರ್ವಾಹ್ನ 11.00 ಗಂಟೆಗೆ ಬೆಂಗಳೂರಿನ ವಿಧಾನ ಸೌಧದ ವಿಧಾನ ಸಭೆಯ ಸಭಾಂಗಣದಲ್ಲಿ ಒಟ್ಟಿಗೆ ಸಭೆ ಸೇರುವ ಕರ್ನಾಟಕ ವಿಧಾನ ಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡಲಿದ್ದು, ಈ ಸಂದರ್ಭದಲ್ಲಿ ತಮ್ಮ ಹಾಜರಾತಿಯನ್ನು ಕೋರಲಾಗಿದೆ.

ಘನತೆವೆತ್ತ ರಾಜ್ಯಪಾಲರ ಭಾಷಣ ಮುಗಿದ ಕೂಡಲೇ, ವಿಧಾನ ಪರಿಷತ್ತು ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಮತ್ತೆ ಸಭೆ ಸೇರಲಿದೆ.

ಆದುದರಿಂದ, ತಾವು ದಯವಿಟ್ಟು ರಾಜ್ಯಪಾಲರ ಭಾಷಣ ಹಾಗೂ ವಿಧಾನ ಪರಿಷತ್ತಿನ ಸಭೆಗೆ ಹಾಜರಾಗಬೇಕೆಂದು ಕೋರುತ್ತೇನೆ.

ತಮ್ಮ ವಿಶ್ವಾಸಿ,

**(ಕೆ.ಆರ್. ಮಹಾಲಕ್ಷ್ಮಿ)**
ಕಾರ್ಯದರ್ಶಿ(ಪ್ರ),
ಕರ್ನಾಟಕ ವಿಧಾನ ಪರಿಷತ್ತು.

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ,**

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತನಾಲ್ಕನೆಯ ಅಧಿವೇಶನ

ಲಘು ಪ್ರಕಟಣೆ ಭಾಗ- 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಬುಧವಾರ, ದಿನಾಂಕ:24ನೇ ಜನವರಿ, 2018

ಸಂಖ್ಯೆ:05

**ವಿಧಾನ ಪರಿಷತ್ತಿನ ಅಧಿವೇಶನ ಪ್ರಾರಂಭದಲ್ಲಿ ಘನತೆವೆತ್ತ ರಾಜ್ಯಪಾಲರ ಭಾಷಣ ಮತ್ತು ವಿಧಾನ ಪರಿಷತ್ತಿನ ಉಪವೇಶನಗಳು ನಡೆಯುವ ಸ್ಥಳ**

ಭಾರತ ಸಂವಿಧಾನದ 176ನೆಯ ಅನುಚ್ಛೇದದ (1)ನೆಯ ಖಂಡದಲ್ಲಿ ವಿಧಾಯಕವಾಗಿರುವಂತೆ ಬೆಂಗಳೂರಿನ ವಿಧಾನಸೌಧದಲ್ಲಿರುವ ವಿಧಾನ ಸಭಾ ಸಭಾಂಗಣದಲ್ಲಿ 2018ನೇ ಇಸವಿ ಫೆಬ್ರವರಿ, 05ನೇ ಸೋಮವಾರ ಪೂರ್ವಾಹ್ನ 11.00 ಗಂಟೆಗೆ ವಿಧಾನ ಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡುತ್ತಾರೆಂಬುದನ್ನು ಮಾನ್ಯ ಸದಸ್ಯರುಗಳಿಗೆ ಈ ಮೂಲಕ ತಿಳಿಸಲಾಗಿದೆ.

ಘನತೆವೆತ್ತ ರಾಜ್ಯಪಾಲರು ಭಾಷಣವನ್ನು ಮುಕ್ತಾಯಗೊಳಿಸಿ ಸಭಾಂಗಣದಿಂದ ತೆರಳಿದ ನಂತರ ಸದಸ್ಯರು ನಿರ್ಗಮಿಸುತ್ತಾರೆ. ಜಂಟಿ ಅಧಿವೇಶನವು ಮುಕ್ತಾಯಗೊಂಡ ಕೂಡಲೇ ವಿಧಾನ ಪರಿಷತ್ತು ಪುನಃ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಸಭೆ ಸೇರುತ್ತದೆ.

05ನೇ ಫೆಬ್ರವರಿ, 2018ನೆಯ ಸೋಮವಾರ ಕರ್ನಾಟಕ ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಸದಸ್ಯರನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡುವ ಸಂದರ್ಭದಲ್ಲಿ ಅನುಸರಿಸಬೇಕಾದ ವಿಧಾನ:-

ಘನತೆವೆತ್ತ ರಾಜ್ಯಪಾಲರು ಬೆಳಿಗ್ಗೆ 10.55 ಗಂಟೆಗೆ ವಿಧಾನಸೌಧದ ಮಹಾದ್ವಾರದ ಮೆಟ್ಟಿಲುಗಳ ಬಳಿಗೆ ಆಗಮಿಸುವರು. ತಮ್ಮ ಕಾರಿನಿಂದ ಇಳಿದ ಬಳಿಕ ಘನತೆವೆತ್ತ ರಾಜ್ಯಪಾಲರನ್ನು ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು ಮತ್ತು ವಿಧಾನ ಸಭೆಯ ಸಭಾಧ್ಯಕ್ಷರು, ವಿಧಾನ ಪರಿಷತ್ತಿನ ಮತ್ತು ವಿಧಾನ ಸಭೆಯ ಕಾರ್ಯದರ್ಶಿಗಳು ಸ್ವಾಗತಿಸಿ, ಮಹಾದ್ವಾರದಿಂದ ಕರೆದುಕೊಂಡು ಬರುವರು. ಅಲ್ಲಿ ಈ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಗುವುದು.

| | |
|---|---|
| **ಕಾರ್ಯದರ್ಶಿ**<br>**ವಿಧಾನ ಸಭೆ** | **ಕಾರ್ಯದರ್ಶಿ**<br>**ವಿಧಾನ ಪರಿಷತ್ತು** |
| **ಮಾನ್ಯ ಸಭಾಧ್ಯಕ್ಷರು**<br>**ವಿಧಾನ ಸಭೆ** | **ಮಾನ್ಯ ಸಭಾಪತಿಯವರು**<br>**ವಿಧಾನ ಪರಿಷತ್ತು** |

| | | |
|---|---|---|
| **ಮಾನ್ಯ ಮುಖ್ಯಮಂತ್ರಿಯವರು** | **ಘನತೆವೆತ್ತರಾಜ್ಯಪಾಲರು**<br>ಎ.ಡಿ.ಸಿ. | **ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು** |